ಆದೇಶ ಬರುತ್ತದೆ ಗೊತ್ತಿಲ್ಲ, ಆದುದರಿಂದ ಆ ಚುನಾವಣೆಗೆ ಸ್ಟೇ ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಲಕ್ಷ್ಮಣ ಎಸ್.ಸವದಿ :– ಸನ್ಮಾನ್ಯ ಶಾಸಕರು ಕೇಳಿರುವ ಉಪಪ್ರಶ್ನೆಗೆ ಕಾನೂನು ಸಲಹೆಯನ್ನು ಪಡೆದುಕೊಂಡು ಮುಂದಿನ ಅಗತ್ಯಕ್ರಮವನ್ನು ನಾವು ಖಂಡಿತವಾಗಿ ತೆಗೆದುಕೊಳ್ಳುತ್ತೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇವೆ.

ಅಧ್ಯಕ್ಷರು :– ಮಾನ್ಯ ಕೃಷಿ ಸಚಿವರು ಮಾನ್ಯ ವಿಶ್ವನಾಥ್ ಮಾಮುನಿಯವರ ಪ್ರಶ್ನೆಗೆ ಉತ್ತರ ಹೇಳಿ. ಮಾನ್ಯ ಚಂದ್ರಶೇಖರ ಮಾಮುನೀಯವರೇ ನಿಮ್ಮ ಪ್ರಶ್ನೆಗೆ ಕಾಲಾವಾಕಾಶ ಕೇಳಿದ್ದಾರೆ.

ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ :– ಮಾನ್ಯ ಅಧ್ಯಕ್ಷರೆ, 29.07.08 ಹಾಗೂ 24.11.08 ... ಏಳು ಮತ್ತು ಹನ್ನೊಂದನೇ ತಿಂಗಳಿನಿಂದ ನಾವು ಕೇಳುತ್ತಿದ್ದೇವೆ. ಸಕ್ಕರೆ ಕಾರ್ಖಾನೆಗಳವರು ರಸ್ತೆ ಕರ ಕೊಡಿ ಎಂದು ಕೇಳುತ್ತಿದ್ದೇವೆ.

ಅಧ್ಯಕ್ಷರು :– ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಏನಾದರೂ ತೊಂದರೆ ಇದೆಯೇ? ಏಕೆಂದರೆ ಅವರು ಹಿಂದೆಯೂ ಈ ಪ್ರಶ್ನೆಯನ್ನು ಕೇಳಿದ್ದರು ಎಂದು ಹೇಳುತ್ತಿದ್ದಾರೆ. ಈಗಲೂ ಉತ್ತರ ಬಂದಿಲ್ಲ. ಅದು ಏನೆಂದು ವಿಚಾರ ಮಾಡಿ ಪರಿಹಾರ ಹುಡುಕಿ. ಲಾಲಾಜಿ ಮೆಂಡನ್‌ರವರು ಬಂದಿಲ್ಲ.

ರೈತರಿಗೆ ನೀಡುವ ಬಿತ್ತನೆ ಬೀಜದ ಬೆಲೆ ನಿಗದಿ ಬಗ್ಗೆ.

65(60) ಶ್ರೀ.ಶಿವಲಿಂಗೇಗೌಡ, ಕೆ.ಎಂ. (ಅರಸೀಕೆರೆ)

ಶ್ರೀ ಎಸ್.ಎ.ರವೀಂದ್ರನಾಥ್. (ಕೃಷಿ ಸಚಿವರು)

ಅ) ರಾಜ್ಯದಲ್ಲಿ ರೈತರಿಂದ ಬಿತ್ತನೆ ಬೀಜವನ್ನು ತೀರಾ ಕಡಿಮೆ ಬೆಲೆಗೆ ಕೊಂಡುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರವು ರೈತರಿಗೆ ಸರಿಯಾದ ಬೆಲೆಯನ್ನು ನೀಡುವಲ್ಲಿ ಕೈಗೊಂಡಿರುವ ಕ್ರಮಗಳೇನು;

ರಾಜ್ಯದಲ್ಲಿ ರೈತರಿಂದ ಬಿತ್ತನೆ ಬೀಜವನ್ನು ತೀರಾ ಕಡಿಮೆ ಬೆಲೆಗೆ ಕೊಂಡುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಕರ್ನಾಟಕ ರಾಜ್ಯ ಬೀಜ ನಿಗಮವು ರೈತರಿಗೆ ಉತ್ತಮ ಬೆಲೆಯನ್ನು ನೀಡಿ ಬಿತ್ತನೆ ಬೀಜಗಳನ್ನು ಖರೀದಿಸುತ್ತಿದೆ.

ಆ) ರೈತರಿಗೆ ಬಿತ್ತನೆ ಬೀಜವನ್ನು ಸರ್ಕಾರವು ಮಾರಾಟ ಮಾಡುವಾಗ ಹೆಚ್ಚು ಬೆಲೆಯನ್ನು ನಿಗದಿಪಡಿಸಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;

ಇಲ್ಲ.

LA. V.S.P-22

ಇಲಾಖಾ ಕಾರ್ಯಕ್ರಮಕ್ಕೆ ಬೇಕಾಗಿರುವ ಬಿತ್ತನೆ ಬೀಜ ಸರಬರಾಜಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ದಡಿಯಲ್ಲಿ ಟೆಂಡರುಗಳನ್ನು ಬೀಜೋತ್ಪಾದಕರು/ ವಿತರಕರುಗಳಿಂದ ಆಹ್ವಾನಿಸಿ ಬಿತ್ತನೆ ಬೀಜದ ಮಾರಾಟ ದರಗಳನ್ನು ನಿಗದಿ ಪಡಿಸಲಾಗುತ್ತಿದೆ.

ಇ) ಉತ್ತಮ ಬಿತ್ತನೆ ಬೀಜದ ಕೊರತೆಯಿಂದ ರೈತರ ಬೆಳೆಗಳು ನಾಶವಾಗುತ್ತಿದ್ದು, ರೈತರು ಸಾವಿಗೆ ಶರಣಾಗುತ್ತಿರುವುದು ನಿಜವೇ; ಹಾಗಿದ್ದಲ್ಲಿ ಸರ್ಕಾರ ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು?

ಬಿತ್ತನೆ ಬೀಜಗಳ ಕೊರತೆಯಿಂದಾಗಿ ರೈತರು ಸಾವಿಗೆ ಶರಣಾಗುತ್ತಿರುವ ಯಾವುದೇ ಪ್ರಕರಣಗಳು ವರದಿ ಯಾಗಿರುವುದಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ :– ಮಾನ್ಯ ಅಧ್ಯಕ್ಷರೆ, ಅವರು ಉತ್ತರವನ್ನು ತಲುಪಿಸಿದ್ದಾರೆ. ಆದರೆ ನಮ್ಮ ಕೃಷಿ ಸಚಿವರು ಏಕೆ ಹೀಗೆ ಉತ್ತರ ಕೊಡುತ್ತಾರೋ ಗೊತ್ತಿಲ್ಲ. ನಾವು ಕೇಳಿರುವುದು ರೈತರ ಬಳಿ ಕಡಿಮೆ ಬೆಲೆಗೆ ಬೀಜವನ್ನು ಎಷ್ಟು ಕೊಂಡುಕೊಳ್ಳುತ್ತಾರೆಂದು. ನಾನು ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಬರೆದು ಮಾಹಿತಿ ಪಡೆದಿದ್ದೇನೆ. ಒಂದು ಉದಾಹರಣೆ ಹೇಳುತ್ತಿದ್ದೇನೆ. ಒಂದು ಕೆ.ಜಿ. ಸೂರ್ಯಕಾಂತಿ ಬೀಜವನ್ನು ರಾಣೆಬೆನ್ನೂರಿನಲ್ಲಿಯೇ ಬೆಳೆಸುತ್ತಾರೆ. ಜಪಾನ್‌ನಲ್ಲೇನೂ ಬೆಳೆಸುತ್ತಿಲ್ಲ. ರಾಣೆಬೆನ್ನೂರಿನಲ್ಲಿ ರೈತರಿಗೆ ಕೊಟ್ಟು ರೈತರ ಹತ್ತಿರ ಬೆಳೆಸುತ್ತಾರೆ. 50 ರೂ. ಗೆ ರೈತರಿಂದ ಬೀಜವನ್ನು ಕೊಂಡುಕೊಂಡು ಇಲ್ಲಿ 150 ರಿಂದ 200 ರೂಪಾಯಿಯವರೆಗೆ ಮಾರಾಟ ಮಾಡುತ್ತಾರೆ. ಒಂದು ಕೆ.ಜಿ. ಸೂರ್ಯಕಾಂತಿ ಬೀಜವನ್ನು ರೈತರಿಗೆ 150 ರೂ. ಗೆ ಮಾರುತ್ತಾರೆ. ಒಂದು ಕೆ.ಜಿ. ಬೀಜವನ್ನು 150 ರೂ.ಗೆ ಮಾರಿದರೆ 100 ರೂ. ದರ ಉಳಿಯುತ್ತದೆ. ಅಂದರೆ ಒಂದು ಕೆ.ಜಿ. ಬೀಜದ ಲಾಭ 100 ರೂ. ಕಂಪನಿಯವರಿಗೋ ಯಾರಿಗೋ ಸಿಗುತ್ತದೆ. ಸರ್ಕಾರದಿಂದ 75 ರೂ. ಸಬ್ಸಿಡಿ ದುಡ್ಡು ಎಲ್ಲಿ ಹೋಯಿತು? ಅದನ್ನೂ ಗುಳುಂ ಅನ್ನಿಸುತ್ತಾರೆ. 150 ರೂ.ಗೆ ಬೀಜ ಮಾರುತ್ತಾರೆ. ಕೆಲವು ಸಂದರ್ಭಗಳಲ್ಲಿ ಅದನ್ನು 400 ರೂ. ಗೆ ಮಾರುತ್ತಾರೆ. ಇವರು ಪ್ರೈವೇಟ್ ಏಜೆನ್ಸಿಯವರಿಗೆ ಕೊಡುತ್ತಾರೆ, ಪ್ರೈವೇಟ್ ಏಜೆನ್ಸಿಯವರು ಸರ್ಕಾರ. ಕೊಟ್ಟ ಬೀಜ ಮುಗಿದ ತಕ್ಷಣ ಇಲ್ಲಿಂದಲೇ ಸಬ್ಸಿಡಿ ತೆಗೆದುಕೊಂಡು ಹೋಗಿ ಅಲ್ಲಿ ಇಟ್ಟುಕೊಂಡು ಅದನ್ನು ಪುನಃ 200 ರೂ.ಗೆ 400 ರೂ. ಗೆ ಮಾರಾಟ ಮಾಡುತ್ತಾನೆ. ಇದನ್ನು ಮಾನ್ಯ ಸಚಿವರು ಕಂಡುಹಿಡಿದು, ರೈತರಿಗೆ ಬೀಜ ಮಾರಾಟದಲ್ಲಿ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಬೇಕು. 50 ರೂ. ಗೆ ರೈತನಿಗೆ ಕೊಟ್ಟು ಬೆಳೆಸಿ, ಅವರೇ ಅವರ ಮನೆಯ ಮುಂದೆ ಮೆಷಿನ್ ತೆಗೆದುಕೊಂಡು ಹೋಗಿ ಪ್ಯಾಕ್ ಮಾಡಿಕೊಂಡು ಬರುತ್ತಾರೆ. ಒಂದು ಕೆ.ಜಿ.ಗೆ 100 ರೂ. ಆಗುವುದಾದರೆ, 75 ರೂ. ಸಬ್ಸಿಡಿ ರೈತರಿಗೆ ಸರ್ಕಾರ ಕೊಡುತ್ತದೆ ಎನ್ನುವುದಾದರೆ, ಅವರಿಗೆ ಒಂದು ಕೆ.ಜಿ.ಗೆ 75 ರೂ. ಲಾಭ ಬೇಕಾ ಆ

ಕಂಪನಿಗಳಿಗೆ? ಶೂ, ಟೈ, ಪ್ಯಾಂಟ್ ಸಿಸ್ಟಮ್ ಆಗಿ ಹಾಕಿಕೊಂಡು ಬರುತ್ತಾರೆ. ನಮ್ಮ ರೈತರೆಲ್ಲ ಇವರು ಬೀಜವನ್ನು ಜಪಾನ್ನಿಂದ ತೆಗೆದುಕೊಂಡು ಬರುತ್ತಾರೆಂದು ತಿಳಿದುಕೊಂಡಿದ್ದಾರೆ. ಪ್ಯಾಕೆಟ್ ಜಪಾನ್‌ನಿಂದ ಹಡಗಿನಲ್ಲಿ ತರುತ್ತಿದ್ದಾರೆ, ಏರೋಪ್ಲೇನ್‌ನಲ್ಲಿ ತಂದಿದ್ದಾರೆಂದು ತಿಳಿದುಕೊಂಡಿದ್ದಾರೆ. ಇವರು ಇಲ್ಲಿಯೇ ರಾಣೆಬೆನ್ನೂರಿನಲ್ಲಿ ಬೆಳೆಸುತ್ತಾರೆಂದು ಬಹಳ ಜನ ರೈತರಿಗೆ ಗೊತ್ತಾಗುವುದಿಲ್ಲ. ಆದ್ದರಿಂದ ಇ 100ರೂ. ಕೊಡಬೇಕಾ ಎಂದು ಕೇಳುತ್ತಿದ್ದೇನೆ. ಬೆಳೆದ ರೈತನಿಗಾದರೂ 100 ರೂ. ಕೊಟ್ಟರೆ, ಒಪ್ಪಿಕೊಳ್ಳೋಣ. 75ರೂ. ಸಬ್ಸಿಡಿ ಕೊಡುವುದಿಲ್ಲ....

ಅಧ್ಯಕ್ಷರು :– ಮತ್ತೆ ಮತ್ತೆ ಅದನ್ನೇ ರಿಪೀಟ್ ಮಾಡಬೇಡಿ. ಉತ್ತರ ಕೇಳಿ.

ಶ್ರೀ ಎಸ್.ಎ. ರವೀಂದ್ರನಾಥ್ :– ಮಾನ್ಯ ಅಧ್ಯಕ್ಷರೆ, ಬಿತ್ತನೆ ಬೀಜಗಳ ಖರೀದಿ ಮತ್ತು ಮಾರಾಟ ದರಗಳು ಬೀಜ ಕಾಯಿದೆ ಅಡಿಯಲ್ಲಿ ಬರುವುದಿಲ್ಲ. ಅವರು ಸೂರ್ಯಕಾಂತಿ ಬೀಜದ ಬಗ್ಗೆ ಹೇಳುತ್ತಿದ್ದಾರೆ. ಪ್ರೈವೇಟ್ ಏಜೆನ್ಸಿಗಳು ಇದನ್ನು ಮಾರಾಟ ಮಾಡುತ್ತಿವೆ. ಸರ್ಕಾರದವರು ನಿಗದಿತ ಬೆಲೆ ಏನಿರುತ್ತದೆ, ಆ ಬೆಲೆಗೇ ಮಾರಾಟ ಮಾಡುತ್ತಾರೆ. ಈ ವರ್ಷ ನಮ್ಮಲ್ಲಿ ಸೂರ್ಯಕಾಂತಿ ಬೀಜದ ಕೊರತೆ ಇದೆ. ಮುಂದಿನ ವರ್ಷ ಕೊರತೆ ಆಗದ ಹಾಗೆ ನೋಡಿಕೊಂಡು ಉತ್ತಮ ರೀತಿಯಲ್ಲಿ ಅವರು ಹೇಳಿದಂತಹ ಸಲಹೆ ಮೇರೆಗೆ ಬೀಜ ಮಾರಾಟ ಮಾಡುವುದನ್ನು ಮಾಡುತ್ತೇವೆ.

ಶ್ರೀ ಕೆ.ಎಂ. ಶಿವಲೀಂಗೇಗೌಡ :– ಮಾನ್ಯ ಅಧ್ಯಕ್ಷರೆ, ಸಚಿವರು ಏನು ಈ ತರಹ ಉತ್ತರ ಕೊಡುತ್ತಾರೆ? ನೀವೇ ಮಾರಾಟ ಮಾಡುವುದು, ನೀವೇ ಸಬ್ಸಿಡಿ ಕೊಡುವುದು. ಕೇಂದ್ರ ಸರ್ಕಾರದ್ದು ರಾಜ್ಯ ಸರ್ಕಾರದ್ದು ಸೇರಿ ಒಂದು ಕೆ.ಜಿ.ಗೆ 75 ರೂ. ಸಬ್ಸಿಡಿ ಕೊಡುತ್ತೀರಿ. ಆ 75 ರೂ. ಕಥೆಯೂ ಇಲ್ಲಿಯೇ ಎ.ಸಿ. ರೂಮ್‌ನಲ್ಲಿ ಮುಗಿದು ಹೋಗುತ್ತದೆ. ರೈತನಿಗೆ ಕೊಡುವುದು 50 ರೂ. ಇನ್ನೂ 25 ರೂ. ಓಡಾಡುವವರಿಗೆ ಉಳಿದುಕೊಳ್ಳಲಿ. ಈ ರಾಜ್ಯದ ರೈತರಿಗೆ 75 ರೂ. ಪುಕ್ಕಟೆ ಕೊಡಬಹುದು. ಸಬ್ಸಿಡಿ ಹಣಕ್ಕೆ ಬೀಜ ಕೊಡಬಹುದು. ಒಂದು ಕೆ.ಜಿ.ಗೆ 150 ರೂ. ಏಕೆ ಕೊಡಬೇಕು? ಕರ್ನಾಟಕ ಬೀಜ ನಿಗಮದಿಂದ ಅಷ್ಟು ಕೊಡುತ್ತಾರೆ, 33 ಕಂಪನಿಗಳವರು ಇರುತ್ತಾರೆ, 33 ಕಂಪನಿಗಳವರು ಒಂದೊಂದು ಜಿಲ್ಲೆಗೆ ಒಬ್ಬೊಬ್ಬರು ಟೆಂಡರ್ ಹಾಕಿಕೊಳ್ಳುತ್ತಾರೆ. compromising tender ನೀನು ಈ ಜಿಲ್ಲೆ ಹಾಕಿಕೋ, ನಾನು ಹಾಸನ ಜಿಲ್ಲೆ ಹಾಕಿಕೊಳ್ಳುತ್ತೇನೆ. ನಾನು ಇನ್ನೊಂದು ಜಿಲ್ಲೆ ಹಾಕಿಕೊಳ್ಳುತ್ತೇನೆಂದು ಹೇಳಿ, ಪ್ರತಿಯೊಂದು ಬೀಜಕ್ಕೆ ಒಬ್ಬೊಬ್ಬರು ಟೆಂಡರ್ ತೆಗೆದುಕೊಳ್ಳುತ್ತಾರೆ. ನಾನು ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಬರೆದು ಪೂರ್ಣ ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ನೀವು ಹೀಗೆ ಹೇಳಿದರೆ ಹೇಗೆ? ಸರ್ಕಾರವೇ 50 ರೂ. ಗೆ ಕೆ.ಜಿ. ಬೀಜ ಕೊಡುವುದು. ಸ್ವಲ್ಪ ವಿವರಗಳನ್ನು ತಿಳಿದುಕೊಳ್ಳಿ. ಅವರು ಯಾರೋ ಬರೆದು ಕೊಟ್ಟರು ಎಂದು ಇಲ್ಲಿ ಉತ್ತರ ಕೊಟ್ಟು ಬಿಟ್ಟರೆ ಹೇಗೆ? ಇವತ್ತು

ಅ ರೈತರ ಗತಿ ಏನು? ರೈತರಿಗೆ75 ರೂ.ಸಬ್ಸಿಡಿ ಏಕೆ ಕೊಡಬೇಕು? ಆ ರೈತರ ದುಡ್ಡೆಲ್ಲ ಗುಳುಂ ಎಂದು ಹೋಗುತ್ತಿದೆ. ಇದನ್ನು ವಿಶೇಷವಾಗಿ ತೆಗೆದುಕೊಳ್ಳಬೇಕು. ಅವರಿಗೆ ಒಂದು ಸಾವಿರ ರೂ. ಕೊಡುತ್ತೇವೆಂದು ಹೇಳುತ್ತೀರಿ, ಅವರದೇ ಸಬ್ಸಿಡಿ ದುಡ್ಡು ಬೇಕಾದಷ್ಟು ಇದೆ. ಏನು ಇದರ ಕಥೆ? ರಾಣೆಬೆನ್ನೂರಿನಲ್ಲಿ ಕೇಳಿ ಸೂರ್ಯಕಾಂತಿ ಬೀಜವನ್ನು ಎಷ್ಟಕ್ಕೆ ಮಾರುತ್ತಾರೆ ಕೇಳಿ. ನಾನು ಹುಡುಕಿಕೊಂಡು ಅಲ್ಲಿಯೇ ಹೋಗಿ ಪರೀಕ್ಷೆ ಮಾಡಿಕೊಂಡು ಬಂದಿದ್ದೇನೆ. ಕಂಪನಿಯವರು ಬೀಜದ ದುಡ್ಡು ಸಹಿತ ಮುರಿದುಕೊಳ್ಳುತ್ತಾರೆ. .. ಔಷಧಿ ದುಡ್ಡು ಮುರಿದುಕೊಳ್ಳುತ್ತಾರೆ. ಪೆಟ್ರೋಲ್ ದುಡ್ಡು ಮುರಿದುಕೊಳ್ಳುತ್ತಾರೆ, ಒಂದು ಸಾರಿ ಹೋಗಿ inspection ಮಾಡಿದ ಛಾರ್ಜ್ ದುಡ್ಡನ್ನೂ ಮುರಿದುಕೊಳ್ಳುತ್ತಾರೆ. ಅವರಿಗೆ 50 ರೂ. ದರ ಕೊಡುತ್ತಾರೆ. ಅದನ್ನು ತಂದು 150 ರಿಂದ 200 ರೂ., 400 ರೂ. ಗೆ ಮಾರುತ್ತಾರೆ. ದಯವಿಟ್ಟು ಇದರ ಬಗ್ಗೆ ಗಮನಹರಿಸಬೇಕು.

ಅಧ್ಯಕ್ಷರು: specific ಆಗಿ ಕೇಳಿ ಹೇಳಿದ್ದೇ ಮತ್ತೆ ಮತ್ತೆ ರಿಪೀಟ್ ಮಾಡಿದರೆ ಏನು ಮಾಡುವುದು?

ಶ್ರೀ ಎಸ್.ಎ. ರವೀಂದ್ರನಾಥ್ :– ಮಾನ್ಯ ಅಧ್ಯಕ್ಷರೆ, ನಡೆದಿರತಕ್ಕಂಥದ್ದು ಹೇಳುವುದು ಅದು ಖಾಸಾಗಿ ಕಂಪನಿಯವರ ಬೀಜ. ಸರ್ಕಾರದ ವತಿಯಿಂದ ಅಲ್ಲ. ಸರ್ಕಾರದ ವತಿಯಿಂದ ಸಬ್ಸಿಡಿ - ವಜಾ ಮಾಡಿ ಕೊಡುವುದು ಅವರಿಗೆ ಯಾವುದೇ ರೀತಿ ತೊಂದರೆಯಾಗದ ಹಾಗೆ ಮುಂದಿನ ಸಾರಿ ಬೀಜ ಕೊಡುತ್ತೇವೆ. ಖಾಸಗಿ ಕಂಪನಿಯವರಿಗೆ ಯಾವುದೇ ಸಬ್ಸಿಡಿ ಕೊಡುವುದಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ಸಬ್ಸಿಡಿ ಕೊಡುವವರು ಯಾರು? ಅವರಿಗೆ ಟೆಂಡರ್ ಕೊಡುವವರು ಯಾರು? ಅವರು ಸುಮ್ಮ ಸುಮ್ಮನೆ ತಂದು ಸಪ್ಲೈ ಮಾಡುತ್ತಾರಾ? ಅವರಿಗೆ ಟೆಂಡರ್ ಕೊಡುವವರು ಯಾರು? ಸಬ್ಸಿಡಿ ಕೊಡುವವರು ಯಾರು? ಆ ಕಂಪನಿಗಳು ಎಲ್ಲಿ ಹುಟ್ಟಿವೆ? ಅವುಗಳಿಗೇನು ಹಗ್ಗ ಮೂಗುದಾರ ಇಲ್ಲವಾ? ಅಧ್ಯಕ್ಷರೆ, ಇಂತಹ ಗಹನವಾದ ವಿಚಾರವನ್ನು ತಳ್ಳಿಕೊಂಡು ಹೋದರೆ ನಾನು ಏನು ಮಾಡುವುದು? ಏನಾದರೂ ಒಂದು ನಿರ್ಣಯ ಮಾಡಿ ಇನ್ನು ಬೀಜದ ಸಮಸ್ಯೆ ಉದ್ಭವವಾಗುತ್ತದೆ. ನಾವು ಹಳ್ಳಿಯ ರೈತರ ಬಳಿ ಬಯ್ಯಿಸಿಕೊಳ್ಳಬೇಕು.

ಅಧ್ಯಕ್ಷರು :– ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಳ್ಳುವುದಾದರೆ ಹೇಳಿ. ಆ ಬೀಜ ಖಾಸಗಿ ಕಂಪನಿಯದು ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ಕಂಟ್ರೋಲ್ ಏಕೆ ಇಲ್ಲ? ಇವರೇ ಎಲ್ಲಾ ಮಾಡುವುದು.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಖಾಸಗಿ ಕಂಪನಿ ಎಂದರೆ, ಕೃಷಿ ಅಧಿಕಾರಿಗಳಿಗೆ ಖಾಸಗಿ ಕಂಪನಿಗಳ ಮೇಲೆ ಹಿಡಿತ ಇಲ್ಲವೇ ಎಂದು ಕೇಳುತ್ತಿದ್ದಾರೆ. ಅದರ ಬಗ್ಗೆ ಕೃಷಿ ಸಚಿವರು ಹೇಳಬೇಕು.

ಶ್ರೀ ಎಸ್.ಎ. ರವೀಂದ್ರನಾಥ್ :– ಮಾನ್ಯ ಅಧ್ಯಕ್ಷರೆ, ಖಾಸಗಿ ಕಂಪನಿಯವರ ಮೇಲೆ ಸಹ ಈ ವರ್ಷ ನಿಯಂತ್ರಣ ಮಾಡಿ ಕಡಿಮೆ ಲಾಭಕ್ಕೆ ಕೊಡುವಂತಹ ರೀತಿಯಲ್ಲಿ ಪ್ರಯತ್ನ ಮಾಡುತ್ತೇನೆ. ಅವರು ಹೇಳುವುದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :– 75 ರೂ.ಗೆ ಬೀಜ ಬರುತ್ತವೆ. ನಿಮ್ಮ ಇಲಾಖೆಯಿಂದ ಮಾಡಿಸಿ. ನಿಮ್ಮ ಕಾಲದಲ್ಲಿ ಮಾಡಿದರೆ ನಿಮಗೆ ಒಳ್ಳೆಯ ಹೆಸರು ಬರುತ್ತದೆ. ಸಬ್ಸಿಡಿ ಕೊಡಬೇಡಿ, ಸಬ್ಸಿಡಿ ದುಡ್ಡಿನಲ್ಲಿ ಉಚಿತವಾಗಿ ಬಿಜ ಕೊಡುತ್ತೇವೆಂದು ಹೇಳಿ

ಅಧ್ಯಕ್ಷರು :– ನಿಮ್ಮ ಇಲಾಖೆಯಿಂದ ಮಾಡಿ. ಮಾನ್ಯ ರೇವಣ್ಣನವರೇ ಮುಂದಿನ ಪ್ರಶ್ನೆ ಕೇಳಿ.

ರಾಜ್ಯದಲ್ಲಿರುವ ಸಹಕಾರ ಸಂಘಗಳ ಬಗ್ಗೆ

66(403) ಶ್ರೀ ಹೆಚ್.ಡಿ.ರೇವಣ್ಣ (ಹೊಳೇನರಸೀಪುರ)

ಅ) ರಾಜ್ಯದಲ್ಲಿರುವ ಸಹಕಾರ ಸಂಘಗಳೆಷ್ಟು; ಇವುಗಳಲ್ಲಿ ಕ್ರಿಯಾಶೀಲ ಮತ್ತು ನಿಷ್ಕ್ರಿಯ ಸಹಕಾರ ಸಂಘಗಳೆಷ್ಟು?

ರಾಜ್ಯದಲ್ಲಿ ದಿನಾಂಕ 31–12–2008ರ ಅಂತ್ಯಕ್ಕೆ ಒಟ್ಟು 33495 ಸಹಕಾರ ಸಂಘಗಳಿದ್ದು, ಇವುಗಳ ಪೈಕಿ 28620 ಕಾರ್ಯನಿರತ ಸಹಕಾರ ಸಂಘಗಳು, 2654 ನಿಷ್ಕ್ರಿಯ ಸಹಕಾರ ಸಂಘಗಳು ಮತ್ತು 2221 ಸಮಾನಾ ಹಂತದ ಸಹಕಾರ ಸಂಘಗಳಿರುತ್ತವೆ.

ಆ) ಕಳೆದ ಮೂರು ವರ್ಷಗಳಿಂದ ವರ್ಷಾವಾರು ಆಡಿಟ್ ಮಾಡಲಾದ ಸಹಕಾರ ಸಂಘಗಳೆಷ್ಟು; ಇದೇ ಅವಧಿಯಲ್ಲಿ ಮರು ಆಡಿಟ್ ಮಾಡಲಾದ ಸಹಕಾರ ಸಂಘಗಳೆಷ್ಟು (ವಿವರ ನೀಡುವುದು)

ಕಳೆದ ಮೂರು ವರ್ಷಗಳಲ್ಲಿ ಲೆಕ್ಕಪರಿಶೋಧನೆ ನಿರ್ವಹಿಸಲಾದ ಸಹಕಾರ ಸಂಘಗಳ ವಿವರಗಳು ಈ ಕೆಳಕಂಡಂತಿರುತ್ತವೆ.

1–4–2005 ರಿಂದ 31–3–2006

ವಿವರ	ಸಂಘಗಳ ಕಾರ್ಯಸ್ಥಿತಿ			ಒಟ್ಟು
	ಕಾರ್ಯ ನಿರತ	ನಿಷ್ಕ್ರಿಯ	ಸಮಾಪನಾ	
ಲೆಕ್ಕ ಪರಿಶೋಧನೆಗೆ ಇದ್ದ ಸಹಕಾರ ಸಂಘಗಳ ಸಂಖ್ಯೆ	26,867	2,891	2,844	32,602
ಲೆಕ್ಕ ಪರಿಶೋಧನೆ ಆದ ಸಹಕಾರ	20,569	1,022	1,223	22,814